ಕ್ರ. ಸಂ.	ಚಟುವಟಿಕೆಯ ಹೆಸರು	ವೆಚ್ಚ ರೂ.	ಭಾಗವಹಿಸಿದ ಯುವಕ/ ಯುವತಿಯರ ಸಂಖ್ಯೆ
3.	ಸ್ಕಂದೋತ್ಸವ ಎಂಬ ಸಂಸ್ಥೆಯವರಿಂದ ರಂಗ ಥಿಯೇಟರ್ ವರ್ಕ್‌ಷಾಪ್ ನಡೆಸಿರುವ ಕುರಿತು	20,000	150
4.	ಮಲ್ಲಿಕಾ ಎಂಬ ಸಂಸ್ಥೆಯವರಿಂದ ನಾಟಕೋತ್ಸವ ಕಾರ್ಯಕ್ರಮ	30,000	200
5.	ಶ್ರೀ ಮಲ್ಲಾಡಿಹಳ್ಳಿ ಯೋಗ ಕೇಂದ್ರ ಇವರಿಂದ ಯೋಗ ಶಿಬಿರ ಕಾರ್ಯಕ್ರಮ	18,000	80
6.	ಯುವ ಬರಹಗಾರರು ಮತ್ತು ಕಲಾವಿದರ ಬಳಗ ಇವರಿಂದ ಮಾತು ಮಲ್ಲಿಗೆ ವರ್ಕ್‌ಷಾಪ್ ನಡೆಸಿರುವ ಬಗ್ಗೆ	20,000	140
7.	ಪೂರ್ವಲ್ ಡಾಟ್‌ಸನ್ ಇವರಿಂದ ದೂರದರ್ಶನ ರಿಪೇರಿ ವರ್ಕ್‌ಷಾಪ್ ನಡೆಸಿರುವ ಬಗ್ಗೆ	15,000	170
8.	ಕಾರ್ಟೂನ್ ಅಸೋಸಿಯೇಷನ್ ಇವರಿಂದ ಕಾರ್ಟೂನ್ ಪ್ರದರ್ಶನ ಕಾರ್ಯಕ್ರಮ	25,000 5,000	250
9.	ಕರ್ನಾಟಕ ಕ್ವಿಜ್ ಅಸೋಸಿಯೇಷನ್ ಇವರಿಂದ ಕ್ವಿಜ್ ಕಾರ್ಯಕ್ರಮ	5,000	80
10.	ಯೂತ್ ಫೋಟೋಗ್ರಾಫಿಕ್ ಸೊಸೈಟಿ ಇವರಿಂದ ಬೇಸಿಕ್ ಫೋಟೋಗ್ರಾಫಿಕ್ ಕಾರ್ಯಕ್ರಮ	25,000	160
11.	ಹರೀಶ್ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆ ಇವರಿಂದ ಮಾನವ ಹಕ್ಕುಗಳು ಎಂಬ ಕಾರ್ಯಕ್ರಮ ಕುರಿತು	25,000	200
12.	ಉಮ್ಮಕ್ಕಮ್ಮದೇವಿ ಯುವತಿ ಮಂಡಳಿ ಇವರಿಂದ ಮಹಿಳಾ ಕಾರ್ಯಕ್ರಮ	20,000	150
		2,63,000	

ರಾಜ್ಯ ಯುವಕ ಕೇಂದ್ರದ ನಿರ್ವಹಣೆ

5010 - ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ರಾಜ್ಯ ಯುವಕ ಕೇಂದ್ರದ ನಿರ್ಮಾಣ ವೆಚ್ಚಕ್ಕಾಗಿ ಕಳೆದ 3 ವರ್ಷಗಳಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು ಮತ್ತು ಬಾಬ್ತುಗಳಿಗೆ ಮಾಡಿದ

ವೆಚ್ಚ ಎಷ್ಟು ? (ವರ್ಷಾವಾರು ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಆ) ರಾಜ್ಯದ ಯುವಕ ಕೇಂದ್ರದಲ್ಲಿರುವ ಯವನಿಕಾ ಸಭಾಂಗಣವನ್ನು ವಿವಿಧ ಸಂಘ ಸಂಸ್ಥೆಗಳಿಗೆ ನೀಡಿದ ಕಳೆದ 3 ವರ್ಷಗಳಲ್ಲಿ ಸಂಗ್ರಹಿಸಿದ ಬಾಡಿಗೆ ಹಣವೆಷ್ಟು ? ಸರ್ಕಾರಕ್ಕೆ ಸಂದಾಯ ಮಾಡಿದ ಹಣವೆಷ್ಟು ? (ವರ್ಷಾವಾರು ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಆ) ಬೆಂಗಳೂರು ನಗರದಲ್ಲಿ ರಾಜ್ಯ ಯುವಕ ಕೇಂದ್ರ ಕಟ್ಟಡವನ್ನು 1977ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಕಳೆದ 3 ವರ್ಷಗಳಲ್ಲಿ ಯಾವುದೇ ಹಣವನ್ನು ಸರ್ಕಾರವು ರಾಜ್ಯ ಯುವಕ ಕೇಂದ್ರ ನಿರ್ಮಾಣ ವೆಚ್ಚಕ್ಕಾಗಿ ಬಿಡುಗಡೆ ಮಾಡಿರುವುದಿಲ್ಲ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸೇರಿದ ಬೆಂಗಳೂರಿನ ರಾಜ್ಯ ಯುವಕ ಕೇಂದ್ರದ ವೆಚ್ಚಕ್ಕಾಗಿ ಕಳೆದ 3 ವರ್ಷಗಳಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣವು ಹಾಗೂ ಮಾಡಿರುವ ವೆಚ್ಚಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ವರ್ಷ	ಯೋಜನೆ ರೂ.	ಯೋಜನೇತರ ರೂ.
1997-98	5,00,000	6,82,000
1998-99	5,00,000	5,91,000
1999-2000	5,00,000	7,00,000

ಯೋಜನೇತರ ಶೀರ್ಷಿಕೆಯಲ್ಲಿ ಒದಗಿಸಿದ ಹಣದ ವೆಚ್ಚದ ವಿವರ

	ಖರ್ಚಿನ ಸ್ವರೂಪ	97-98	1998-99	1999-2000
1.	ನೌಕರರ ದಿನಗೂಲಿ	1,06,469	2,38,797	2,57,880
2.	ವಿದ್ಯುತ್ ಬಿಲ್ ಭರಿಸಲು	1,76,192	24,940	1,48,688
3.	ನೀರಿನ ಬಿಲ್ ಭರಿಸಲು	2,42,413	66,585	1,10,965
4.	ಭದ್ರತಾ ಗಾರ್ಡ್‌ಗಳ ಸೇವಾ ಶುಲ್ಕ ಸ್ವಚ್ಛತಾ ಸಾಮಗ್ರಿ ಖರೀದಿಸಲು ಹಾಗೂ ಇತರೇ ನಿರ್ವಹಣಾ ವಸ್ತುಗಳ ಖರೀದಿ	84,470	98,389	1,56,139
5.	ಕಟ್ಟಡದಲ್ಲಿ ವಿದ್ಯುತ್ ದುರಸ್ತಿ, ಬಣ್ಣ ಬಳಿಸಲು ಹಾಗೂ ಇತರೇ ದುರಸ್ತಿ ಕೆಲಸಗಳನ್ನು ಕೈಗೊಂಡಿದ್ದಕ್ಕಾಗಿ	82,567	1,62,239	25,755

ಯೋಜನೆ ಶೀರ್ಷಿಕೆಯಲ್ಲಿ ನೀಡಿದ ಹಣದ ವೆಚ್ಚದ ವಿವರ

ವರ್ಷ	ಮೊತ್ತ	ಖರ್ಚಿನ ವಿವರ
1997-98	5.00 ಲಕ್ಷ	ರೂ. 4.00 ಲಕ್ಷಗಳನ್ನು ಪುನರ್ ವಿನಿಯೋಗಿಸಿದೆ ಮತ್ತು 1.00 ಲಕ್ಷ ರೂ. ಅನ್ನು ಆಧ್ಯರ್ಪಿಸಿದೆ.
1998-99	5.00 ಲಕ್ಷ	ರಾಜ್ಯ ಯುವಕ ಕೇಂದ್ರದ ಆವರಣದಲ್ಲಿ ಹೂದೋಟವನ್ನು ಅಭಿವೃದ್ಧಿಪಡಿಸಲು ವೆಚ್ಚ ಮಾಡಲಾಯಿತು.
1999-2000	5.00 ಲಕ್ಷ	ರಾಜ್ಯ ಯುವಕ ಕೇಂದ್ರದ ಹೂದೋಟವನ್ನು ವಿದ್ಯುತ್ತಿನ ದುರಸ್ತಿ, ಇಂಟರ್‌ಕಾಂ ಜಾಲ ವ್ಯವಸ್ಥೆ ಇತ್ಯಾದಿಗಳಿಗಾಗಿ ಬಳಸಲಾಗಿದೆ.

ಆ) ಕಳೆದ ಮೂರು (3) ವರ್ಷಗಳಲ್ಲ ಯವನಿಕಾ ರಂಗಮಂದಿರದಿಂದ ಬಾಡಿಗೆಯಾಗಿ ಪಡೆದ ಹಣದ ವರ್ಷವಾರು ವಿವರ ಹಾಗೂ ಅದನ್ನು ಸರ್ಕಾರಕ್ಕೆ ಸಂದಾಯ ಮಾಡಿದ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ

ವರ್ಷ	ಬಾಡಿಗೆ ಹಣ ರೂ.	ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತ ರೂ.
1997-98	3,45,000	3,45,000
1998-99	3,33,000	3,33,000
1999-2000	4,30,000	4,30,000

ಅಧ್ಯಕ್ಷರು : ಮಂಡಿಸಲಾಯಿತು, ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆಯು 3.00 ಘಂಟೆಗೆ ಸೇರುವುದು. (ಸಭೆಯು 2.04 ನಿಮಿಷಕ್ಕೆ ಮುಂದೂಡಲಾಯಿತು)

(ಸಭೆಯು ಪುನಃ 3.20 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರಾದ ಎಂ.ವಿ. ವೆಂಕಟಪ್ಪನವರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ

ಅಧ್ಯಕ್ಷರು : ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರು ಮುಖ್ಯಮಂತ್ರಿಗಳ ಜೊತೆ ಉಡುಪಿಗೆ ಹೋಗುತ್ತಾರಂತೆ. ಅದರಿಂದ ಮೊದಲು ಅವರ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾವು ಎರಡು-ಮೂರು ವಿಷಯಗಳನ್ನು ಕಳುಹಿಸಿದ್ದೆ. ಒಂದು ವಾರದಿಂದಲೂ ನೋಡುತ್ತಿದ್ದೇನೆ. ಯಾವುದು ಕೂಡ ಬಂದಿಲ್ಲ.